**017/DM/18**

| Register Number | | | | | | | | | |
|---|---|---|---|---|---|---|---|---|---|

# DEPARTMENTAL EXAMINATIONS

## TRANSLATION TEST — SECOND PAPER — TRANSLATION OF NEWS PAPER REPORT IN KANNADA TO ENGLISH

(Without Books)

Maximum Time : 2.30 hours                                    Maximum Marks : 100

**Answer ALL questions.**

**Translate into English.**

1. "ಯೋಜನಾರಹಿತ ಜನವಸತಿಯೇ ಕಾರಣ" (80)

ಭಾರತದಲ್ಲಿ ಇತ್ತೀಚೆಗೆ ಉಂಟಾಗುತ್ತಿರುವ ಪ್ರವಾಹ ಪರಿಸ್ಥಿತಿಗೆ ತಾಪಮಾನ ಬದಲಾವಣೆ ಕಾರಣ. ಇದರ ಜೊತೆ ನದಿ ದಂಡೆಗಳಲ್ಲಿ ಯೋಜನಾರಹಿತವಾಗಿ ಜನವಸತಿ ನೆಲೆಗಳು ಅವ್ಯಾಹತವಾಗಿ ತಲೆ ಎತ್ತಿರುವುದು ಇನ್ನೂ ಹೆಚ್ಚಿನ ಅನಾಹುತಗಳು ಸಂಭವಿಸಲು ಕಾರಣವಾಗಿದೆ.

ಪ್ರವಾಹ ಮತ್ತು ಸುನಾಮಿಗೂ ವ್ಯತ್ಯಾಸವಿದೆ. ಸಮುದ್ರ ಮಟ್ಟ ಏರಿಕೆಯಾಗುವುದರಿಂದ ಸುನಾಮಿ ಸಂಭವಿಸುವುದಿಲ್ಲ. ಇದು ನಿಸರ್ಗ ಸಹಜವಾದುದು. ಯಾವುದೇ ರೀತಿಯ ಹವಾಮಾನ ಇದ್ದರೂ ನಿಯಮಿತವಾಗಿ ಸುನಾಮಿಗಳು ಘಟಿಸುತ್ತಿರುತ್ತವೆ.

ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ ಅತಿಯಾದ ಕೈಗಾರೀಕರಣ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಎಗ್ಗಿಲ್ಲದ ಬಳಕೆಯಿಂದ ಮಾಲಿನ್ಯ ಪ್ರಮಾಣ ಹೆಚ್ಚಿದೆ. ಇದಕ್ಕೆ ಭಾರತವೂ ಹೊರತಾಗಿಲ್ಲ. ಇಲ್ಲಿ ಇಂಗಾಲ ಹೊರ ಸೂಸುವಿಕೆಯ ತಲಾ ಪ್ರಮಾಣ ಕಡಿಮೆ ಇದೆ. ಆದರೆ ಒಟ್ಟು ಮಾಲಿನ್ಯ ಹೊರಸೂಸುವ ಪ್ರಮಾಣ ಮಾತ್ರ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಏರಿಕೆ ಆಗುತ್ತಿದೆ.

ಹಾಗಾಗಿ ಅಭಿವೃದ್ಧಿ ಹೊಂದಿದ ದೇಶಗಳು ಕಡಿಮೆ ಇಂಗಾಲ ಅಥವಾ ಕಡಿಮೆ ಮಾಲಿನ್ಯ ಹೊಂದಿದ ಅಭಿವೃದ್ಧಿಯ ಹಾದಿಯನ್ನು ಕಂಡುಕೊಂಡು, ಮಾಲಿನ್ಯ ಪ್ರಮಾಣ ತಗ್ಗಿಸಲು ಮಹತ್ತರ ಕೊಡುಗೆ ನೀಡಬೇಕು.

**[Turn over**

2. ಈ ಕೆಳಕಂಡ ಗಾದೆಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿರಿ. (10 × 2 = 20)

(a) ಮುಖವೇ ಮನಸ್ಸಿನ ಕನ್ನಡಿ.

(b) ಬೊಗಳುವ ನಾಯಿ ಕಚ್ಚುವುದಿಲ್ಲ.

(c) ಮಿತಿ ಮೀರಿದ ಅಮೃತವೂ ನಂಜು.

(d) ತಾಳಿದವನು ಬಾಳಿಯಾನು.

(e) ತುಂಬಿದ ಕೊಡ ತುಳುಕುವುದಿಲ್ಲ.

(f) ಸಮಯಕ್ಕೆ ಒದಗಿದವನೇ ನೆಂಟ.

(g) ಮೌನಂ ಪಂಡಿತ ಲಕ್ಷಣಂ.

(h) ಇಂದಿನ ಸೋಲು ನಾಳೆಯ ಗೆಲುವು.

(i) ಆಡುವವ ತಪ್ಪುತ್ತಾನೆ. ನಡೆಯುವವ ಎಡವುತ್ತಾನೆ.

(j) ಬುದ್ಧಿವಂತನೇ ಬಲವಂತ.